# MEASLES &RUBELLA
VACCINATION CAMPAIGN

Ministry of Health and Family Welfare
Government of India

# Be a responsible family by defeating Measles and Rubella



## Key Messages for Parents

- A state-wide Measles-Rubella (MR) vaccination campaign is being conducted in your city/town/village.
- If you have children in the age group of 9 months to 15 years, then please take them to the nearest vaccination session site during the MR campaign.
- Please look out for advice from Government health workers ANM/ASHA/AWW on the MR campaign in your vicinity, or contact them to know more about the campaign.
- Keep a look out for any advice/directive received from the child's school/educational institute and take the necessary actions. In case of any doubt, seek clarification from school/health worker/health center
- Permit your school-going child to be vaccinated at the school during MR campaign
- Promptly seek treatment or act as recommended by health worker during any sign of an adverse event following immunization.
- Encourage other parents with children in the target age group to participate in the MR campaign and complete the child's RI schedule as per the immunization schedule.
- Carry the child's immunization card whenever visiting an immunization outreach session site or health centre.
- Complete the series of routine vaccinations (visits beginning at birth or as specified on the child's immunization card), irrespective of the vaccination received during the campaign.

**7th to 28th February 2017 Campaign will be held for 9 months to 15 Years Children**

NATIONAL HEALTH MISSION
राष्ट्रीय स्वास्थ्य मिशन

**Measles Elimination and Rubella control by year 2020.**

Be Wise! Get your child fully immunized

# ದಡಾರ ಮತ್ತು ರುಬೆಲ್ಲಾ

ಲಸಿಕಾ ಅಭಿಯಾನ

Ministry of Health and Family Welfare
Government of India

## ಭಾರತವನ್ನು ದಡಾರ – ರುಬೆಲ್ಲಾಮುಕ್ತ ರಾಷ್ಟ್ರವನ್ನಾಗಿ ಮಾಡುವುದು ನಿಮ್ಮ ಕೈಯಲ್ಲಿದೆ



## ಪೋಷಕರಿಗೆ ಪ್ರಮುಖ ಸಂದೇಶ

ದಡಾರ–ರುಬೆಲ್ಲಾ (MR) ಲಸಿಕೆಯು ದಡಾರ ಮತ್ತು ರುಬೆಲ್ಲಾ ಕಾಯಿಲೆಗಳಿಂದ ರಕ್ಷಣೆ ನೀಡುತ್ತದೆ. MR ಲಸಿಕೆಯನ್ನು ಒಂದು ವಿಶೇಷ ಅಭಿಯಾನದ ಮೂಲಕ ರಾಜ್ಯದ 9 ತಿಂಗಳಿಂದ 15 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ನೀಡಲಾಗುತ್ತದೆ. ಈ ಅಭಿಯಾನವು ಎಲ್ಲಾ ಶಾಲೆಗಳಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಎಲ್ಲಾ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಈ ಹಿಂದೆ ಲಸಿಕೆ ಪಡೆದಿದ್ದರೂ ಸಹ ಅಭಿಯಾನದ ಸಂದರ್ಭದಲ್ಲಿ MR ಲಸಿಕೆಯನ್ನು ನೀಡಬೇಕಾಗಿರುತ್ತದೆ.

ದಡಾರ ಒಂದು ಮಾರಣಾಂತಿಕ ಕಾಯಿಲೆಯಾಗಿದ್ದು, ಕೆಮ್ಮು ಮತ್ತು ಸೀನುವುದರ ಮೂಲಕ ಇತರರಿಗೆ ಹರಡುತ್ತದೆ. ದಡಾರ ನಿಮ್ಮ ಮಗುವನ್ನು ನ್ಯುಮೋನಿಯಾ, ಅತಿಸಾರ ಬೇದಿ, ಮೆದುಳಿನ ಸೋಂಕಿನಂತಹ ಕಾಯಿಲೆಗಳಿಗೆ ತುತ್ತಾಗಿಸಬಹುದು. ತುರಿಕೆ, ವಿಪರೀತ ಜ್ವರ, ಕೆಮ್ಮು, ನೆಗಡಿ ಮತ್ತು ಕೆಂಗಣ್ಣು ದಡಾರದ ಮುಖ್ಯ ಲಕ್ಷಣಗಳು.

ರುಬೆಲ್ಲಾ ರೋಗವು ಗರ್ಭಿಣಿ ಸ್ತ್ರೀಯರಲ್ಲಿ ಕಾಣಿಸಿಕೊಂಡಾಗ ಹುಟ್ಟುವ ಮಕ್ಕಳಲ್ಲಿ ಜನ್ಮತಃ ಗ್ಲುಕೋಮಾ, ಕಣ್ಣಿನಪೊರೆ, ಕಿವುಡುತನ, ಮೆದುಳು ಜ್ವರ, ಮಾನಸಿಕ ಅಸ್ವಸ್ಥತೆ, ಬುದ್ಧಿಮಾಂದ್ಯತೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ಈಡು ಮಾಡಬಹುದು. ರುಬೆಲ್ಲಾ ವೈರಸ್ ಗರ್ಭಪಾತಕ್ಕೂ ಸಹ ಕಾರಣವಾಗಬಹುದು.

- ರಾಜ್ಯ ಮಟ್ಟದ ದಡಾರ–ರುಬೆಲ್ಲಾ ಅಭಿಯಾನ ಕಾರ್ಯಕ್ರಮವನ್ನು ನಿಮ್ಮ ಹಳ್ಳಿ/ ಪಟ್ಟಣ/ ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.
- ನಿಮ್ಮ ಪ್ರದೇಶದಲ್ಲಿ 9 ತಿಂಗಳಿಂದ – 15 ವರ್ಷದ ಮಕ್ಕಳು ಇದ್ದಲ್ಲಿ ಅವರನ್ನು ದಡಾರ–ರುಬೆಲ್ಲಾ ಅಭಿಯಾನದ ಸೆಷನ್ನಗಳಿಗೆ ಕರೆದುಕೊಂಡು ಹೋಗುವುದು.
- ನಿಮ್ಮ ಪ್ರದೇಶದಲ್ಲಿರುವ ಸರ್ಕಾರಿ ಸಿಬ್ಬಂದಿಗಳಾದ ಆಶಾ/ ಆರೋಗ್ಯ ಕಾರ್ಯಕರ್ತೆ/ ಅಂಗನವಾಡಿ ಕಾರ್ಯಕರ್ತೆಯರಿಂದ ದಡಾರ–ರುಬೆಲ್ಲಾ ಅಭಿಯಾನದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುವುದು.
- ನಿಮ್ಮ ಪ್ರದೇಶದಲ್ಲಿರುವ ಶಾಲೆಗಳಿಂದ ದಡಾರ–ರುಬೆಲ್ಲಾ ಅಭಿಯಾನದ ಬಗ್ಗೆ ಬಂದಿರುವ ಮಾಹಿತಿ/ ಸಂದೇಶದ ಬಗ್ಗೆ ತಿಳಿದುಕೊಳ್ಳಿ ಹಾಗೂ ಯಾವುದೇ ಸಂದೇಹವಿದ್ದಲ್ಲಿ ಶಾಲೆ / ಆರೋಗ್ಯ ಕಾರ್ಯಕರ್ತೆಯರು/ ಆರೋಗ್ಯ ಕೇಂದ್ರದಿಂದ ಬಗೆಹರಿಸಿಕೊಳ್ಳಿ.
- ಶಾಲೆಗೆ ಹೋಗುವ ನಿಮ್ಮ ಮಕ್ಕಳಿಗೆ ಶಾಲೆಯಲ್ಲಿ ದಡಾರ–ರುಬೆಲ್ಲಾ ಲಸಿಕೆ ಪಡೆಯಲು ಅನುಮತಿ ನೀಡಿ.
- ದಡಾರ–ರುಬೆಲ್ಲಾ ಲಸಿಕೆ ಪಡೆದ ನಂತರ ಯಾವುದೇ ಅಡ್ಡ ಪರಿಣಾಮ ಕಂಡುಬಂದಲ್ಲಿ ಸೂಕ್ತ ಚಿಕಿತ್ಸೆಯನ್ನು ಪಡೆಯಿರಿ.
- ಬೇರೆ ಪಾಲಕರಿಗೆ/ ಪೋಷಕರಿಗೆ ತಮ್ಮ ಮಕ್ಕಳಿಗೆ ಲಸಿಕೆ ಪಡೆಯಲು ಉತ್ತೇಜನ ನೀಡಿ ಹಾಗೂ ಲಸಿಕಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತಿಳಿಸಿ.

ಲಸಿಕಾ ಸತ್ರ / ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಲಸಿಕಾ ಕಾರ್ಡನ್ನು ತೆಗೆದುಕೊಂಡು ಹೋಗಿ.

**7 ರಿಂದ 28 ಫೆಬ್ರವರಿ 2017**

**9 ತಿಂಗಳಿಂದ 15 ವರ್ಷದ ಮಕ್ಕಳ ಅಭಿಯಾನ**

NATIONAL HEALTH MISSION
राष्ट्रीय स्वास्थ्य मिशन

ಬುದ್ಧಿವಂತರಾಗಿ!
ನಿಮ್ಮ ಮಗುವಿಗೆ ಸಂಪೂರ್ಣ ಲಸಿಕೆಗಳನ್ನು ಹಾಕಿಸಿ

**2020ಕ್ಕೆ ದಡಾರ ನಿರ್ಮೂಲನೆ ಹಾಗೂ ರುಬೆಲ್ಲಾ ನಿಯಂತ್ರಣ ಸಾಧಿಸೋಣ**

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು